ದಿನಾಂಕಃ 23-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ 13 ರವರ ಪರ ವಕೀಲರಿಂದ,

1) ವಾದಿಯು ಆರೋಗ್ಯವಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ತಂದೆಗೆ ಐದು ಜನ ಹೆಣ್ಣು ಮಕ್ಕಳು ಇರುತ್ತಾರೆ. ವಾದಿ ನನ್ನ ಹೆಂಡತಿ. ನನ್ನ ಮತ್ತು ವಾದಿಯ ಮದುವೆ ಸುಮಾರು 30 ವರ್ಷಗಳ ಹಿಂದೆ ಅಂದರೆ, 1995 ಸಾಲಿನಲ್ಲಿ ಆಗಿರುತ್ತದೆ. ನಾನು ವಾದಿಯನ್ನು ಮದುವೆ ಆಗುವ ಕಾಲಕ್ಕೆ ವಾದಿಯ ತಂದೆ ತೀರಿಕೊಂಡಿದ್ದರು. ವಾದಿಯನ್ನು ನಮ್ಮ ಖರ್ಚಿನಿಂದ ನಾನೇ ಮದುವೆ ಮಾಡಿಕೊಂಡಿರುತ್ತೇನೆ. ನನ್ನ ಮತ್ತು ವಾದಿಯ ಮದುವೆಯನ್ನು ಪ್ರತಿವಾದಿ 3 ಮತ್ತು ಅವರ ಗಂಡ ಮಾಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಗಂಡ ತನ್ನ ಸ್ವಂತ ಖರ್ಚಿನಿಂದ ನನ್ನ ಮತ್ತು ವಾದಿಯ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಲಗ್ನ ಪತ್ರಿಕೆಯಲ್ಲಿ 3 ನೇ ಪ್ರತಿವಾದಿಯ ಗಂಡ ಹಿರಿಯರಾಗಿರುವ ಕಾರಣ ಅವರ ಹೆಸರನ್ನು ಬರೆಯಲಾಗಿದೆ.

2) ನಾನು ಮೈಸೂರಿನಲ್ಲಿ ವಾಸವಾಗಿರುತ್ತೇನೆ. 3 ನೇ ಪ್ರತಿವಾದಿಗೆ ಮೂರು ಜನ ಮಕ್ಕಳು. 3 ನೇ ಪ್ರತಿವಾದಿ ಮತ್ತು ಅವರ ಮಕ್ಕಳ ನಡುವೆ ವಿಭಾಗ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1 ರವರು ತನ್ನ ಜೀವಂತ ಅವಧಿಯಲ್ಲಿ ಮೈಸೂರಿನಲ್ಲಿ ವಾಸವಾಗಿದ್ದರು. ಪ್ರತಿವಾದಿ 1 ರವರು ಜೀವಂತ ಅವಧಿಯಲ್ಲಿ ಚಂದಗಾಲು ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಮೃತ ಪ್ರತಿವಾದಿ 1 ರವರು ಮರಣ ಶಾಸನ ಬರೆದಿರುವ ಬಗ್ಗೆ ನನಗೆ ಗೂತ್ತಿರುವುದಿಲ್ಲ.

3) ನನಗೆ ದಾವಾಸ್ವತ್ತಿನಲ್ಲಿ 12 ಗುಂಟೆ ಭಾಗಾಂಶ ಹಕ್ಕು ಇರುತ್ತದೆ. ಸರ್ವೇ ನಂ. 145/3 ರಲ್ಲಿರುವ 30 ಗುಂಟೆ ಆಸ್ತಿಯನ್ನು ವಾದಿಗೆ ಅವರ ತಂದೆ ಮರಣ ಶಾಸನ ಬರೆದುಕೊಟ್ಟಿರುತ್ತಾರೆ. ವಾದಿಯ ತಂದೆ 1990 ರಲ್ಲಿ ತೀರಿಕೊಂಡಿರುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ 3 ಮತ್ತು ಅವರ ಗಂಡ ಸುಮಾರು 20 ಲಕ್ಷ ಹಣವನ್ನು ಖರ್ಚು ಮಾಡಿ

ಮನೆಯನ್ನು ನವೀಕರಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮುದ್ದಪ್ಪ ಎಂಬುವವರು ವಾದಿಯ ತಂದೆಯ ತಮ್ಮ. ನನ್ನ ಮದುವೆ ಆಗುವ ಕಾಲಕ್ಕೆ ಮುದ್ದಪ್ಪ ಇರುವ ಬಗ್ಗೆ ನನಗೆ ನೆನಪಿರುವುದಿಲ್ಲ. ಮುದ್ದಪ್ಪ ರವರು ನನ್ನ ಮದುವೆ ಆಗುವ ಕಾಲಕ್ಕೆ ಜೀವಂತ ಇದ್ದರು ಎಂದರೆ ನನಗೆ ಗೊತ್ತಿಲ್ಲ.

4) ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ಮಂಜುನಾಥ ರವರು ಪಡೆದು ನನಗೆ ನೀಡಿರುತ್ತಾರೆ. ನಾನು ನಿಶಾನೆ ಪಿ-3 ಮತ್ತು 4 ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ